**ಮೈಸೂರಿನ ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಎಂ.ಎ.ಸಿ.ಟಿ., ಇವರ ನ್ಯಾಯಾಲಯದಲ್ಲಿ**

# ಎಂ.ವಿ.ಸಿಃ 806 /2022

| ಹೆಸರು | ಕೆ ಪ್ರಕಾಶ್ ರಾವ್ | ಪಿ.ಡಬ್ಲ್ಯುಃ 2 |
|---|---|---|
| ತಂದೆಯ ಹೆಸರು | ಕೃಷ್ಣ ಮೂರ್ತಿ | ಸಾಕ್ಷಿಯನ್ನು ದಿನಾಂಕಃ 21.03.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು |
| ವಯಸ್ಸು | 59 ವರ್ಷ | |
| ಉದ್ಯೋಗ | ದ್ವಿತೀಯ ದರ್ಜೆ ಸಹಾಯ, ಕಮ್ಯಾಂಡೋ ಕಚೇರಿ, ಮೈಸೂರು. | |
| ವಾಸ | ಮೈಸೂರು | |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನ್ಯಾಯಾಲಯದ ಸಮನ್ಸ್ ಮೇರೆಗೆ ಈ ದಿನ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ಅಧಿಕಾರ ಪತ್ರ ಹಾಜರುಪಡಿಸಿದ್ದು, ನಿಪಿ. 15 ಎಂದು, ಐದು ಪೇ ಸ್ಲಿಪ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 16 ಎಂದು, ರಜೆ ಪಡೆದ ಬಗ್ಗೆ ಅಧಿಕೃತ ಜ್ಞಾಪನ ಪತ್ರ ದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 17 ಎಂದು, ರಜಾ ಅರ್ಜಿ ಪ್ರಪತ್ರ ಹಾಜರು ಪಡಿಸಿದ್ದು ಅದರ ದೃಢೀಕೃತ ನಕಲನ್ನು ನಿಪಿ. 18 ಎಂದು, ಮೆಡಿಕಲ್ ಸರ್ಟೀಫಿಕೇಟ್ ನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 19 ಎಂದು, ಫಿಟ್ನೆಸ್ ಸರ್ಟೀಫಿಕೇಟ್ ನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 20 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅರ್ಜಿದಾರರು ನಮ್ಮ ಇಲಾಖೆಯಲ್ಲಿ 15-20 ವರ್ಷದಿಂದ ಕೆಲಸ ಮಾಡುತ್ತಿರಬಹುದು. ಸದರಿಯವರಿಗೆ ವರ್ಷಕ್ಕೆ 15 ಸಿ.ಎಲ್, ಕಮ್ಯೂಟೇಡ್ -20, ಇ.ಎಲ್ -30 ಇರುತ್ತದೆ. ಅರ್ಜಿದಾರರು ಖಾತೆಯಲ್ಲಿ ಎಷ್ಟು ಇ.ಎಲ್ ಉಳಿಸಿಕೊಂಡಿರುತ್ತಾರೆ ಎಂದು ಮಾಹಿತಿ ಇಲ್ಲ.

ಉಳಿಸಿಕೊಂಡ ಇ.ಎಲ್ ಗಳು ನಿವೃತ್ತಿ ಹೊಂದುವ ಕಾಲಕ್ಕೆ ಮರುಪಾವತಿ ಪಡೆಯುತ್ತಾರೆ. ಅರ್ಜಿದಾರರು ಈಗ ಕೆಲಸಕ್ಕೆ ಬರುತ್ತಿದ್ದರು. ಅರ್ಜಿದಾರರು ಈಗಲೂ ಅದೇ ಕೆಲಸ ಮುಂದುವರಿಸುತ್ತಿದ್ದಾರೆ ಎಂದರೆ ಸರಿ. ಅರ್ಜಿದಾರರಿಗೆ ಈಗ ಪ್ರಸ್ತುತ ಎಷ್ಟು ಸಂಬಳ ಬರುತ್ತಿದೆ ಎಂದು ನನಗೆ ಮಾಹಿತಿ ಇಲ್ಲ. ಪ್ರತಿ ವರ್ಷ ಇಂಕ್ರಿಮೆಂಟ್ ಜಮೆ ಆಗುತ್ತಿದ್ದು ಆ ಪ್ರಕಾರ ಸಂಬಳ ನೀಡುತ್ತಾರೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.